**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ**

**ಸಿಸಿ ಸಂಃ 1052/2021**

| | | |
|---|---|---|
| ಸಾಕ್ಷಿಯ ಹೆಸರುಃ | ಕುಮಾರಸ್ವಾಮಿ ಹೆಚ್.ಆರ್ | ಫ್ರಾಸಾಃಃ 10 |
| ತಂದೆಯ ಹೆಸರುಃ | ರೇಣುಕಾಸ್ವಾಮಿ | ಚಾಸಾಃಃ 26 |
| ವಯಸ್ಸುಃ | 39 ವರ್ಷ | ಪ್ರಮಾಣೀಕರಿಸಿದ<br>ದಿಃ 19/09/2025 |
| ಉದ್ಯೋಗಃ | ಮುಖ್ಯ ಪೇದೆ, ಬೈಲಕುಪ್ಪೆ ಠಾಣೆ | |
| ವಾಸಸ್ಥಳಃ | ಬೈಲಕುಪ್ಪೆ | |

**ಮುಖ್ಯ ವಿಚಾರಣೆಃ** ಸಸಅ **ರಿಂದಃ**

ನಾನು 2019 ರಿಂದ 2021 ರ ವರೆಗೆ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ದಿಃ 27.08.2019 ರಂದು ಚಾಸಾ -27 ರವರ ಜೊತೆಗೆ ಈ ಪ್ರಕರಣದ ಕೃತ್ಯ ನಡೆದ ಸ್ಥಳಕ್ಕೆ ಹೋಗಿ, ಚಾಸಾ-3 ರವರು ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಚಾಸಾ- 7 ಮತ್ತು 8 ರವರ ಸಮಕ್ಷಮ ಬೆಳಿಗ್ಗೆ 10-30 ರಿಂದ 11-30 ಗಂಟೆಯ ವರಗೆ ಚಾಸಾ - 27 ರವರು ಹೇಳಿದಂತೆ ಸ್ಥಳ ಮಹಜರನ್ನು ನನ್ನ ಕೈಬರಹದಲ್ಲಿ ಬರೆದಿರುತ್ತೇನೆ.
2. ನಂತರ ಅದೇ ದಿನ ಮಧ್ಯಾಹ್ನ 12-00 ರಿಂದ 12-30 ಗಂಟೆಯವರೆಗೆ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ನಮ್ಮ ಸಿಬ್ಬಂದಿ ಮಂಜುನಾಥ ರವರು ಹಾಜರುಪಡಿಸಿದ ಕೆಎ.12.ಕ್ಯೂ.8551 ರ ಡಿಸ್ಕವರಿ ಬೈಕನ್ನು ತನಿಖಾಧಿಕಾರಿಗಳು ಪಂಚರಾದ ಚಾಸಾ - 9 ಮತ್ತು 10 ರವರ ಸಮಕ್ಷಮ ಅಮಾನತುಪಡಿಸಿಕೊಂಡಿದ್ದು, ಮಹಜರನ್ನು ನನ್ನ ಕೈಬರಹದಲ್ಲಿ ಬರೆದಿರುತ್ತೇನೆ.
3. ಸಾಕ್ಷಿಯು ಸ್ಥಳ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿ.ಪಿ.3** ಎಂದು ಗುರುತಿಸಿದ್ದು, ಸಹಿಯನ್ನು **ನಿ.ಪಿ.3(ಸಿ)** ಎಂದು ಗುರುತಿಸಲಾಯಿತು.
4. ಸಾಕ್ಷಿಯು ಅಮಾನತು ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.5 ಎಂದು ಗುರುತಿಸಿದ್ದು, ಸಹಿಯನ್ನು ನಿ.ಪಿ.5(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿಗಳ **ಪರ ವಕೀಲ**ರಿಂದಃ

1. ನನ್ನನ್ನು ತನಿಖಾಧಿಕಾರಿಗಳು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಹಾಗೂ ಯಾವುದೇ ಮಹಜರ್ ಮಾಡಿರುವುದಿಲ್ಲ ಮತ್ತು ಮಹಜರನ್ನು ನಾನು ಬರೆದಿಲ್ಲ ಎಂದರೆ ಸರಿಯಲ್ಲ.
2. ನನ್ನ ಸಮಕ್ಷಮ ಯಾವುದೇ ವಾಹನವನ್ನು ಅಮಾನತುಪಡಿಸಿಕೊಂಡಿಲ್ಲ ಹಾಗೂ ನನ್ನ ಕೈಬರಹದಲ್ಲಿ ಯಾವುದೇ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ.
3. ನಾನು ಮೇಲಾಧಿಕಾರಿಗಳ ಮಾತು ಕೇಳಿ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಪ್ರಧಾನ ಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ.